ಛಿದ್ರಗೊಂಡಂತೆ ಗೋಚರಿಸುತ್ತಿದೆ. ಈ ಕ್ರಮವನ್ನು ಕಾದಂಬರಿಯಂಥ ದೀರ್ಘ ಕಥನದಲ್ಲಿ ಮತ್ತಷ್ಟು ಒಳಕ್ಕೆ ಹೋಗಿ ನೋಡಬಹುದು. ಬೇರುಗಳು ಭಾರತೀಯವಾದರೂ, ಕಾಂಡ ಮತ್ತು ಚಿಗುರುಗಳು ಸಂಪೂರ್ಣ ಅನ್ಯವಾಗುವ ಹಾದಿಯಲ್ಲಿವೆ. ಕಾವ್ಯಾ ಅವರು ಈ ದಾರಿಯಲ್ಲಿ ಸಂಪೂರ್ಣ ಹೊಸಬರೇನೂ ಅಲ್ಲ. ನನ್ನ ಮಟ್ಟಿಗೆ ಇವರು ಮತ್ತು ಇವರ ಸಮಕಾಲೀನರು ಮೂರನೇ ತಲೆಮಾರಿಗೆ ಸೇರಿದವರು. ತಮಗೆ ಸಿಕ್ಕ ಅನ್ಯ ಸಂಸ್ಕೃತಿಯ ಅನುಭವಲೋಕವನ್ನು ಕಥನರೂಪದಲ್ಲಿ ಅನಾವರಣ ಮಾಡುತ್ತಿದ್ದಾರೆ. ಇದುವರೆಗಿನ ಕಥೆಗಳಲ್ಲಿ ಕರ್ನಾಟಕ ಮತ್ತು ಪಾಶ್ಚಾತ್ಯ ಲೋಕಗಳಲ್ಲಿ ಇವರ ಪಾತ್ರಗಳು ಅಡ್ಡಾಡುತ್ತವೆ. ಕಾರ್ಪೊರೇಟ್ ಕಂಪನಿಗಳ ಬದುಕು; ಹೆಣ್ಣುಜೀವಗಳ ಮುಕ್ತತೆ ಮತ್ತು ದಿಗ್ಭ್ರಮೆಗಳು; ಭಾರತೀಯ ಸಾಂಪ್ರದಾಯಿಕತೆಯ ಅನಾಥತೆ; ಅಡೋಲೆಸೆಂಟ್ ಯುವಕರ ಮುಕ್ತತೆ ಮತ್ತು ಹಿರಿಯರ ತಲ್ಲಣಗಳು ಕಾವ್ಯಾ ಅವರ ಕಥಾಲೋಕವನ್ನು ಆವರಿಸಿರುವ ಕೆಲ ಕಾಳಜಿಗಳು. ಇಲ್ಲಿ ಬರುವ ಹೆಣ್ಣುಲೋಕ ಕಾಮ ಮತ್ತು ಸ್ವ ಬದುಕಿನ ಮುಕ್ತತೆಯಲ್ಲೇ ತೇಲಾಡಬಲ್ಲದು. ನೈತಿಕ ಮತ್ತು ಅನೈತಿಕ ಎಂಬ ಪರಿಭಾಷೆಗಳು ಇಂದಿನ ಹೆಣ್ಣುಕಥನಕ್ಕೆ ಹೊರತಾಗಿ ಇನ್ನೇನೋ ಹುಡುಕುವ ದಿಕ್ಕಿನಲ್ಲಿವೆ ಅಂತೆನಿಸಿದೆ. ಕಾವ್ಯಾ ಅವರ ಹೆಣ್ಣು ಪಾತ್ರಗಳು ಮೇಲುನೋಟಕ್ಕೆ ಮುಕ್ತತೆಯನ್ನು ಕಂಡರೂ, ಆಳದಲ್ಲಿ ಗೂಢತೆಯನ್ನೇ ಕಾಪಾಡಿಕೊಳ್ಳುತ್ತವೆ. 'ಮಾಕೋನ ಏಕಾಂತ' ಮತ್ತು 'ತಂದೆ'ಯಂಥ ಕಥೆಗಳು ವಲಸೆಗೊಂಡ ಮಧ್ಯಮವರ್ಗದ ಬದುಕನ್ನೇ ಉಸುರುತ್ತವೆ. ಈ ಕಥೆಗಳ ಹೆಣ್ಣು ಜೀವಗಳು ಒಳಗೊಂಡಂತೆ ಶಾಲಿನಿ, ಕ್ಲಾರಾಳ ಗೆಳತಿ ಇವರೆಲ್ಲಾ ಗೂಢತೆಯಲ್ಲೇ ಮಿಲನವಾಗಬಲ್ಲವು. ತಮ್ಮ ಮನೋಲೋಕದಲ್ಲಿ ವಿಚಿತ್ರ ಬಗೆಯ ಸಾಂಪ್ರದಾಯಿಕತೆಯನ್ನು ಒಳಗು ಮಾಡಿಕೊಂಡಿವೆ; ಅಥವ ಮನೋಲೋಕಗಳ ಭಿನ್ನತೆಯೇ ಹೊರತು ದೇಹಕ್ಕೂ ಮನಸ್ಸಿಗೂ ಅಂತರ ಬಹಳ ಕಡಿಮೆ. ಇಲ್ಲಿ ಮುಖ್ಯವಾಗುವುದು ವಲಸೆಗೊಂಡ ಬದುಕನ್ನು ಮೀರಿದ ಆರುಷ್ ಮತ್ತು ಮಾಕೋರ ವ್ಯಕ್ತಿತ್ವಗಳು. ಪಶ್ಚಿಮ ಸಂಸ್ಕೃತಿಯನ್ನು ರೂಢಿಸಿಕೊಳ್ಳುತ್ತಿರುವ ಮತ್ತು ಬಹುತೇಕ ಭಾರತೀಯ ಮನಸ್ಥಿತಿಗಳನ್ನು ಮೀರುತ್ತಿರುವ ಹೊಸತಲೆಮಾರಿದು. ಹಾಗಾಗಿಯೇ ನನಗೆ ಕಾವ್ಯ ಅವರ 'ಪದವಿ ಪ್ರದಾನ' ಎಂಬ ಕಥೆ ವಲಸೆಗೊಂಡ ಭಾರತೀಯರ ದ್ವಂದ್ವ ಮನಸ್ಥಿತಿಯನ್ನು ಹೇಳುತ್ತದೆ. ಈ ಬಗೆಯ ಕಥೆಗಳು ಅವರ ಸ್ವಂತಿಕೆಯನ್ನು ಕಾಪಾಡುತ್ತವೆ. ಕನ್ನಡ ನೆಲಕ್ಕೆ ಅಂಟಿಕೊಂಡ ಕೆಲ ಕಥೆಗಳಲ್ಲಿ ಗಂಡುಲೋಕದ ಸಂಶಯಗಳೇ ಸ್ಥಾಯಿ. ಇಲ್ಲಿನ ಹೆಣ್ಣು ಪಾತ್ರಗಳು ತೀರಾ ಭಿನ್ನವೆಂದು ಹೇಳಲಾರೆ. ಹಾಗೆ ನೋಡಿದರೆ, ಅಮೆರಿಕದಲ್ಲೇ ನಡೆಯುವ ಅಕ್ಷಯ್ ಪಂಡಿತ್‌ರ 'ಫ್ರೀ ವೇ' ಕಥೆಯ ನಿವೇದಿತಾ ಅಲ್ಲಿನ ಗಂಡುಲೋಕವನ್ನು ಸಮರ್ಥವಾಗಿ ಅರ್ಥಮಾಡಿಕೊಳ್ಳುತ್ತಾಳೆ. ಕಾವ್ಯಾರ ಮುಖ್ಯ ಸಮಸ್ಯೆ ಎಂದರೆ, ಅಮೆರಿಕದ ಜೀವನಶೈಲಿಯನ್ನು ಮತ್ತು ಅಲ್ಲಿ ನಡೆಯುವ ಘಟನೆಗಳನ್ನು ಸಮರ್ಥವಾಗಿ ಪರಿಚಯಿಸುತ್ತಾರೆ ಅನಿಸುತ್ತದೆ. ಇವರ ಬಳಸುವ ಭಾಷೆ ಸರಳ, ಸುಂದರವಾಗಿದ್ದರೂ ಆಶಯ ಮಾತ್ರ ಸಂಕೀರ್ಣತೆಯ ಸ್ವರೂಪವನ್ನು ಪಡೆಯದೇ ಹೋಗುತ್ತದೆ. ಕಥೆ ಕಟ್ಟುವ ಶಕ್ತಿ ತೀವ್ರವಾಗಿದ್ದರೂ, ಘಟನೆಗಳನ್ನು ರಂಜನೀಯಗೊಳಿಸಿ ಅಂತ್ಯವನ್ನು ತೀರಾ ಅಮೂರ್ತಗೊಳಿಸುತ್ತಾರೆ. ಈ ಮೂಲಕ ಸಂಬಂಧಗಳನ್ನು ಕಾಡುವಂತೆ ಮಾಡದೇ ವಾಚ್ಯಗೊಳಿಸುತ್ತಾರೆ. ಈ ಮಾತು ಪೂರ್ಣಿಮಾ ಮಾಳಗಿಮನಿ ಅವರಿಗೂ ಅನ್ವಯವಾಗುತ್ತದೆ. ಕಾರ್ಪೊರೇಟ್ ಲೋಕದ ಕಥನದಲ್ಲಿ ಕಾಮಸಂಬಂಧಗಳು 'ಸಾಮಾನ್ಯ'ವೆಂಬಂತೆ ಕಾಣಿಸುತ್ತವೆ; ಆದರೆ ಆ ಬಗೆಯ ಸಂಬಂಧಗಳು ಏಕಮುಖಿಯಾದರೆ ಹೇಗೆ? ವ್ಯಾಪಾರ, ಗಣಕಯಂತ್ರ ಇತ್ಯಾದಿಗಳ ನಡುವೆ ಮನುಷ್ಯ ಹಾತೊರೆಯುವುದು ಬದುಕಿನ ಯಾವ ಲಯಕ್ಕಾಗಿ ಎಂಬ ಪ್ರಶ್ನೆಯೂ ಕಾಡುತ್ತದೆ. ಹಲವು ಬಾರಿ ಕಾಮ ಕೇವಲ ಲೋಲುಪತೆಯಾಗಿ ಕಾಣುತ್ತದೆ ಹೊರತು ಬದುಕಿನ ಪರಿವರ್ತನೆಯ ಹಾದಿಯಲ್ಲಿ ಅಲ್ಲ ಅನಿಸುತ್ತದೆ. ಒಂದು ರೀತಿಯಲ್ಲಿ 'ಕಾಮ' ಮನುಷ್ಯನ ಆಯ್ಕೆ ಮತ್ತು ಹಕ್ಕು ಆಗಿರುವ ಸಂದರ್ಭದಲ್ಲಿ ಸಂಬಂಧಗಳು ಬೇರೆ ಸ್ವರೂಪವನ್ನು ಪಡೆಯಬಲ್ಲವು. ಈ ಬಗೆಯ ಚರ್ಚೆ ಬೆಳೆಸುವ ಕಥನಗಳು ಹೊಸಬರಲ್ಲಿ ಕಡಿಮೆ ಎಂದೇ ಹೇಳಬೇಕು.

